(*b*) if so, when the action taken to start the work of the tank ;

(*c*) if not, the reasons for not taking action to prepare plans and estimates and start the work of tank ?

Sri H. M. CHANNABASAPPA (Minister for Public Works and Electricity).—

(*a*) No.

(*b*) Does not arise in view of reply to clause (*a*).

(*c*) The proposal refers to the construction of a new tank near Samandur village which requires detailed investigations.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ ನನ್ನ (ಸಿ) ಪ್ರಶ್ನೆಗೆ ಉತ್ತರವಾಗಿ ಈ ಪ್ರಪೋಜಲ್ಸ್ ರೆಫರ್ ಮಾಡಿದ್ದೇವೆ ಎಂದು ಹೇಳಿದ್ದೀರಿ, ಏನು ಪ್ರಪೋಜರ್ಸ್ ರೆಫರ್ ಮಾಡಿದ್ದೀರಿ, ಯಾರಿಗೆ ರೆಫರ್ ಮಾಡಿದ್ದೀರಿ, ಎಷ್ಟು ದಿವಸಗಳಲ್ಲಿ ಆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ರೆಫರ್ ಮಾಡಿದ್ದೇವೆ ಎನ್ನುವುದು ಸ್ವಾಭಾವಿಕ. ಅದನ್ನು ನಮ್ಮ ಅಧಿಕಾರಿಗಳಿಗೆ ರೆಫರ್ ಮಾಡಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು ಪ್ರಮುಖವಾಗಿ ಹೇಳಬೇಕು, ಅದನ್ನು ಅಸಿಸ್ಟೆಂಟ್ ಇಂಜಿನಿಯರಿಗೆ ರೆಫರ್ ಮಾಡಿದ್ದೀರಾ, ಎಗ್ಸಿಕ್ಯುಟೀವ್ ಇಂಜಿನಿಯರಿಗೆ ರೆಫರ್ ಮಾಡಿದ್ದೀರಾ, ಅಥವಾ ಸೂಪರಿಂಟೆಂಡೆಂಟ್ ಇಂಜಿನಿಯರಿಗೆ ರೆಫರ್ ಮಾಡಿದ್ದೀರಾ ? ಮತ್ತು ಅದು ಎಷ್ಟು ದಿವಸಗಳಿಂದ ಪೆಂಡಿಂಗ್‌ನಲ್ಲಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಚೀಫ್ ಇಂಜಿನಿಯರಿಗೆ ರೆಫರ್ ಮಾಡಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ ಸಮಂದೂರು ಗ್ರಾಮದ ಕೆರೆಯ ಕೆಳಗಡೆ 200 ಎಕರೆ ನೀರಾವರಿಯಾಗುತ್ತದೆ. ಕಳೆದ 10 ವರ್ಷಗಳಿಂದ ಈ ಕೆರೆಯ ನಿರ್ಮಾಣಕ್ಕೆ ಪ್ರಪೋಜರ್ ಕಳುಹಿಸಲಾಗುತ್ತಿದೆ. ಆದರೆ ಆ ಕೆಲಸ ಇನ್ನೂ ಆಗಿಲ್ಲ, ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ಆ ಫೈಲ್ ಎಲ್ಲಿದೆ ಎಂಬುದನ್ನು ತರಿಸಿ ಅದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಪರಿಶೀಲಿಸಬೇಕು ಎಂದು ಹೇಳಿದ್ದೇನೆ.

Asphalting of Maddur-Basaral Road

721. Sri A. D. BILIGOWDA (Maddur).—

Will the Minister for Public Works and Electricity be pleased to state :—

(*a*) whether there is any proposal to asphalt the Maddur-Basaral Road *vi* Koppa :

(*b*) whether the new M. C. Road and the Shivapura Main Road in Maddur Town manitained by the P. W. D. is to be cement concreted ?

Sri H. M. CHANNABASAPPA (Minister for Public Works and Electricity).—

(*a*) No.

(SRI H. M. CHANNABASAPPA)

(*b*) Both the roads within the Municipal Town limits are being maintained by the Maddur Town Municipal authorities. Hence, the question of Cement concreting the roads by the Public Works Department does not arise.

ಶ್ರೀ ಎ. ಡಿ. ಬಿಳಿಗೌಡ.—ತಮ್ಮ ಉತ್ತರದಲ್ಲಿ ಮದ್ದೂರು ಬಸ್ಯಾಳ್ ರಸ್ತೆ ಅಸ್ಫಾಲ್ಟ್ ಮಾಡುವುದಕ್ಕೆ ಏನೂ ಪ್ರೊಪೋಸಲ್ಸ್ ಬಂದಿಲ್ಲವೆಂದು ಹೇಳಿದ್ದೀರಿ. 1956ನೇ ಇಸವಿಯಿಂದ ಒಂದೇ ಸಮನಾಗಿ ಇದರ ಬಗ್ಗೆ ಒತ್ತಾಯ ಬರುತ್ತಿದೆ. ಆದರೂ ನನಗೆ ತಿಳಿದಿರುವ ಪ್ರಕಾರ ಆಗಿನ ರಾಜಕೀಯ ಕಾರಣಗಳಿಂದ ಅದು ನಿಂತು ಹೋಗಿದೆ. ಇದು ಬಹಳ ಪ್ರಾಮುಖ್ಯವಾದ ರಸ್ತೆಯಾಗಿರುವುದರಿಂದ ಇದರ ಬಗ್ಗೆ ಗಮನ ಕೊಟ್ಟು ಮಾಡಿಸಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ 4—5 ಮೈಲ್ ರಸ್ತೆ ಅಸ್ಫಾಲ್ಟ್ ಆಗಿದೆ. ಇನ್ನು ಉಳಿದ ಕಡೆ ಜಲ್ಲಿ ರಸ್ತೆಯಾಗಿ ಮಾಡಿದೆ. ಈಗ ಹಣದ ಅಭಾವದಿಂದ ನದ್ಯಕ್ಕೆ ಯಾವ ಅಸ್ಫಲ್ಟಿಂಗ್ ಆಫ್ ರೋಡ್ಸ್ ಕೆಲಸವನ್ನೂ ತೆಗೆದುಕೊಳ್ಳುವುದಕ್ಕೆ ಅಡಚಣೆಯಾಗಿದೆ.

ಶ್ರೀ ಎ. ಡಿ. ಬಿಳಿಗೌಡ.—ಆದರೂ ಸ್ವಲ್ಪ ಸ್ವಲ್ಪವಾದರೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪೀಸ್ ವೀಸಾಗಿ ಇದನ್ನು ಮಾಡುವುದರಿಂದ ಯಾರಿಗೂ ಇದರಿಂದ ಲಾಭವಿಲ್ಲ. ಅದು ಒಂದು ಡೆಡ್ ಇನ್‌ವೆಸ್ಟ್‌ಮೆಂಟ್ ಆಗುತ್ತದೆ. ಮಾಡುವುದಾದರೆ ಪೂರ್ತಿಯಾಗಿ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ರಸ್ತೆಯನ್ನು ಅಚ್ಚು ಕಟ್ಟು ಆಗಿ ಇಟ್ಟುಕೊಳ್ಳುವುದಕ್ಕೆ ನೋಡಬೇಕು.

ಶ್ರೀ ಎಂ. ಮಲ್ಲಪ್ಪ.—ಪೂರ್ತಿಯಾಗಿ ತೆಗೆದುಕೊಳ್ಳುವುದಕ್ಕೆ ಹಣವಿಲ್ಲವೆಂದು ಹೇಳುತ್ತಿದ್ದೀರಿ. ಆದರೆ ಸ್ವಲ್ಪ ಸ್ವಲ್ಪವಾದರೂ ತೆಗೆದುಕೊಳ್ಳುವುದು ಒಳ್ಳೆಯದಲ್ಲವೆಂದು ಹೇಳುತ್ತಿದ್ದೀರಿ. ಆದ್ದರಿಂದ ಒಂದು 10 ಮೈಲಿಯಾದರೂ ತೆಗೆದುಕೊಳ್ಳುವುದಕ್ಕೆ ಏಕೆ ಪ್ರಯತ್ನ ಮಾಡಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಟ್ಟು ಅದು 22 ವರೆ ಮೈಲು ಉದ್ದವಾಗುತ್ತದೆ. ನಾನು ಹೇಳಿದ್ದು ಒಂದೊಂದು ಮೈಲು ಅಸ್ಫಾಲ್ಟ್ ಮಾಡಿದರೆ ಹೆಚ್ಚಿನ ಪ್ರಯೋಜನವಿಲ್ಲ ಎಂದು. ಮಾಡಿದರೆ ಅದನ್ನು ಎರಡು ಇನ್‌ಸ್ಟಾಲ್‌ಮೆಂಟಿನಲ್ಲಿ ಮಾಡಬೇಕಾಗುತ್ತದೆ, ಇಲ್ಲವೇ ಮೂರು ಇನ್‌ಸ್ಟಾಲ್‌ಮೆಂಟಿನಲ್ಲಿ ಮಾಡಬೇಕಾಗುತ್ತದೆ. ಕೇವಲ ಒಂದೆರಡು ಮೈಲು ಮಾಡಿದರೆ ಅದರಿಂದ ಜನರಿಗೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ತಾವು ಸ್ವಲ್ಪ ಮಾಡುವುದಕ್ಕಾಗುವುದಿಲ್ಲ ಮತ್ತು ಒಟ್ಟಿಗೆ 25 ಮೈಲಿ ಮಾಡುವುದಕ್ಕೆ ಹಣದ ಅಭಾವ ಇದೆ ಎಂದು ಹೇಳುತ್ತಿದ್ದೀರಿ. ಇದನ್ನು 1955ನೇ ಇಸವಿಯಿಂದಲೂ ಮಾಡಬೇಕೆಂದು ಒತ್ತಾಯ ಇರುವುದರಿಂದ ಇದಕ್ಕೆ ಪ್ರಿಯಾರಿಟಿ ಕೊಟ್ಟು ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದಕ್ಕಿಂತಲೂ ಹೆಚ್ಚು ಪ್ರಿಯಾರಿಟಿ ಕೊಡತಕ್ಕಂತಹ ಕೆಲಸಗಳು ಬೇರೆ ಇವೆ. ಅದಕ್ಕೋಸ್ಕರ ರಸ್ತೆಯನ್ನು ಉತ್ತಮಪಡಿಸಿ ಅದು ವಾಹನಗಳ ಸಂಚಾರಕ್ಕೆ ಯೋಗ್ಯವಾಗಿರುವಂತೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎ. ಡಿ. ಬಿಳಿಗೌಡ.—ತಮ್ಮ (ಬಿ) ಉತ್ತರದಲ್ಲಿ ಎಂ.ಸಿ. ರೋಡ್ ಮತ್ತು ಶಿವಪುರ ಮೈನ್ ರೋಡುಗಳಿಗೂ ತಮ್ಮ ಇಲಾಖೆಗೂ ಸಂಬಂಧವಿಲ್ಲವೆಂದು ಹೇಳಿದ್ದೀರಿ. ಆದರೆ ನನಗೆ ತಿಳಿದ ಪ್ರಕಾರ ಶಿಂಶಾದಿಂದ ಕೆಲವು ಮೈಲು ರಸ್ತೆಗಳನ್ನು ತಾವು ಮೈಂಟೈನ್ ಮಾಡಬೇಕು. ಆದ್ದರಿಂದ ತಾವು ಇದನ್ನು ಮಾಡುವುದಕ್ಕೆ ಆದ್ಯತೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಮದ್ದೂರ್ ಒಳಗೆ ಹೋಗತಕ್ಕ ರಸ್ತೆಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ತಮ್ಮ ಪ್ರಶ್ನೆ ಹೀಗೆ ಇದೆ. 'Whether the new M.C. Road and the Shivapur Main Rood in Maddur Town maintained by the P.W.D. is to be cement concreted ? For that the answer is as follows: "Both

the roads within the Municipal Town limits are being maintained by the Maddur Town Municipal authorities. Hence the question of cement concreting the roads by the P.W.D. does not arise." The answer is very clear.

ಶ್ರೀ ಎ. ಡಿ ಬಿಳಿಗೌಡ.—ಮೊದಲು ಮದ್ದೂರು ಶೋಡಿನಲ್ಲಿ ಸ್ವಲ್ಪ ಸಿಮೆಂಟ್ ಕಾಂಕ್ರೀಟ್ ಆಗಿದೆ. ಸ್ವಲ್ಪ ಇನ್ನೂ ಆಗಿಲ್ಲ. ಆದ್ದರಿಂದ ಅದನ್ನು ಸಿಮೆಂಟ್ ಕಾಂಕ್ರೀಟ್ ಮಾಡುವುದು ಸೂಕ್ತವಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಿಮೆಂಟ್ ಅಭಾವ ಇರುವ ಕಾಲದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

Expansion of Government College Building at Hassan

832. Sri K. H. HANUME GOWDA (Hassan).—

Will the Minister for Education be pleased to state :—

(*a*) the year in which the first grade college building of Hassan was constructed and the number of students accommodated therein ;

(*b*) the number of students in the college at present ;

(*c*) how many years ago it came to the notice of the Government that this building is not in proportionate to the strength of the students therein ;

(*d*) whether estimates in respect of extension of building, construction of science block and hostel building have been prepared ;

(*e*) if so, the estimated cost of the same ?

Sri A. R. BADARINARAYANA (Minister for Education).—

(*a*) The College building was constructed in 195 . The then students strength was 500.

(*b*) 2883.

(*c*) This matter came to the notice of the Government about 4-5 years ago and the building was extended suitably and is being extended also.

(*d*) They are being prepared.

		Rs.
(*e*) 1.	Estimate for additional rooms	1,86,000-00
2.	Estimate for Science block	5,10,000-00
3.	Estimate for Hostel	6,50,000-00

Sanction has already been accorded by the Government in respect of item number one. The other two estimates have not yet been received by the Government. It is learnt that the same are under the consideration of the Chief Engineer.